# <u>ಸೈನಿಕ ಶಾಲೆ ವಿಜಯಪುರ</u>

## <u>ರೈಪಲ್ ಶೂಟಿಂಗ್ ಒಳಾಂಗಣ ಕ್ರೀಡಾಂಗಣದ ಉದ್ಘಾಟನೆ ಸಮಾರಂಭ : ೨೧-೧೧-೨೦೧೭</u>

ಕರ್ನಾಟಕದ ಪ್ರತಿಸ್ಟಿತ ಶಾಲೆಗಳಲ್ಲಿ ಒಂದಾದ ವಿಜಯಪುರ ಸೈನಿಕ ಶಾಲೆಯಲ್ಲಿ, ರೈಪಲ್ ಶೂಟಿಂಗ್ ಒಳಾಂಗಣ ಕ್ರೀಡಾಂಗಣದ ಉದ್ಘಾಟನಾ ಸಮಾರಂಭ, ಬೆಳಗ್ಗೆ ೧೧೧೫ಕ್ಕೆ ಜರುಗಿತು.

ಈ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿ ಯಾಗಿ, ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಸುಬಾಸ್ ಚಂದ್ರ ಕುಂಟಿಯಾ, ಐ ಎ ಎಸ್, ಬೆಂಗಳೂರು ಆಗಮಿಸಿದ್ದರು. ಮೊದಲಿಗೆ ಅವರು ಶಾಲೆಯ ಆವರಣದಲ್ಲಿರುವ ಹುತಾತ್ಮ ಸ್ಮಾರಕಕ್ಕೆ ಹೂಗುಚ್ಚ ಸಮರ್ಪಿಸಿ ನಂತರ ವಿದ್ಯಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿದರು. ನಂತರ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿದ ರೈಪಲ್ ಶೂಟಿಂಗ್ ಒಳಾಂಗಣ ಕ್ರೀಡಾಂಗಣವನ್ನು ಉದ್ಘಾಟಿಸಿದರು. ಅವರು ಮಾತನಾಡುತ್ತ "ಆಧುನಿಕ ಕ್ರೀಡಾಜಗತ್ತಿನಲ್ಲಿ ಶೂಟಿಂಗ್ ಕ್ರೀಡಗೆ ಅಗ್ರಸ್ಥಾನವಿದೆ. ಓಲಂಪಿಕ್ ಕ್ರೀಡಾಕೂಟಗಳಲ್ಲಿ ಈ ಕ್ರೀಡಗೆ ಅನೇಕ ಪದಕಗಳಿರುವುದನ್ನು ಗಮನಸಿದರೆ, ಈ ಕ್ರೀಡೆಯ ಮಹತ್ವ ತಿಳಿಯುತ್ತದೆ. ಸೈನಿಕ್ ಶಾಲೆಯಿಂದ ಓಲಂಪಿಕ್ ಚಿನ್ನ ಪಡೆಯುವ ಶೂಟರ್-ಗಳು ಮೂಡಿ ಬರಲಿ, ಎಂದು ಆಶಿಸುತ್ತೇನೆ" ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಚಾರ್ಯ ಕರ್ನಲ್ ತಮೋಜಿತ್ ಬಿಸ್ವಾಸ್ ಮುಖ್ಯ ಅತಿಥಿಗಳ ಪರಿಚಯ ಭಾಷಣಮಾಡಿ ಅವರಿಗೆ ಶಾಲೆಯ ನೆನಪಿನ ಕಾಣಿಕೆ ಪ್ರದಾನ ಮಾಡಿದರು. ಹಾಗೆಯೆ ಈ ಹಿಂದೆ ಪ್ರಾಚಾರ್ಯರಾಗಿದ್ದ ನಿವೃತ್ತ ಸೇನಾಧಿಕಾರಿ ಏರ್ ಕಮೊಡೊರ್ ಜೆ ಎಸ್ ಆನಂದ್ ಅವರನ್ನು ಕೂಡ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತಾಧಿಕಾರಿ ಸ್ಕ್ವಾಡರ್ನ್ ಲೀಡರ್ ಎ ಮುರುಳೀಧರನ್ ಮಾತನಾಡುತ್ತ ಶೂಟಿಂಗ್ ರೈಪಲ್ ಕ್ರೀಡಾಂಗಣದ ಕುರಿತು ಸವಿವರವಾಗಿ ವಿವರಿಸಿದರು .ಉಪ

ಪ್ರಾಚಾರ್ಯ ಸ್ಕ್ವಾಡರ್ನ್ ಲೀಡರ್ ಕೆ ಜೆ ಎಮ್ ರೆಡ್ಡಿ ,ವರಿಷ್ಠ ಗುರು ಜಿ ಶ್ರೀರಾಮಮೂರ್ತಿ ಮತ್ತು ಸಿಬ್ಬಂದಿಯವರು ಉಪಸ್ಥಿತರಿದ್ದರು.




